# ಗುತ್ತಿಗೆ ಹಾಗೂ ಮಾರಾಟ ಒಪ್ಪಂದ

ಸನ್ 20__________ರ ____________________ತಿಂಗಳು __________________ ದಿನಾಂಕದಂದು ಒಬ್ಬ ಪಕ್ಷಕಾರರಾದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. ಇವರು ಇಲ್ಲಿ ಇನ್ನು ಮುಂದೆ ಗುತ್ತಿಗೆಗೆ ಕೊಡುವವನು / ಮಾರಾಟಗಾರ ಎಂದು ಕರೆಯಲಾಗುವ (ಈ ಪದವು ಸಂದರ್ಭವು ಹಾಗೆ ಅನುಮತಿಸಿದಾಗಲೆಲ್ಲಾ ಹಿತಾಸಕ್ತಿಯಲ್ಲಿರುವವರು ಮತ್ತು ಹಸ್ತಾಂತರಿಸುವವರು ಎಂದು ಅರ್ಥ ಮತ್ತು ಅದು ಅವರನ್ನು ಒಳಗೊಳ್ಳುತ್ತದೆ) ಮತ್ತು ಮತ್ತೊಬ್ಬ ಪಕ್ಷಕಾರರಾದ ಶ್ರೀಮತಿ / ಶ್ರೀ ____________________________________________ ____________________________________________ ಇವರ ಮಗ / ಮಗಳು / ಗಂಡ / ಹೆಂಡತಿ ಶ್ರೀಮತಿ / ಶ್ರೀ ____________________________________________ ವಯಸ್ಸು ______________________ ವರ್ಷ, ಮನೆ ನಂ. ____________________________________ ____________________________________________ ವಿಳಾಸದಲ್ಲಿ ವಾಸವಾಗಿರುವ ಇವರು ಇನ್ನು ಮುಂದೆ ಗುತ್ತಿಗೆ ಪಡೆಯುವವನು / ಖರೀದಿದಾರ ಎಂದು ಕರೆಯಲಾಗುವ (ಈ ಪದವು ಸಂದರ್ಭವು ಹಾಗೆ ಅನುಮತಿಸಿದಾಗಲೆಲ್ಲಾ ಆತನ / ಅವಳ ವಾರಸುದಾರರು, ಕಾರ್ಯನಿರ್ವಾಹಕರು, ಆಡಳಿತಗಾರರು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳು ಎಂದು ಅರ್ಥ ಮತ್ತು ಅದು ಅವರನ್ನು ಒಳಗೊಳ್ಳುತ್ತದೆ) ಇವರ ನಡುವೆ ಒಂದು ಒಪ್ಪಂದವನ್ನು ಮಾಡಿಕೊಳ್ಳಲಾಯಿತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ____________________________________________ ಬಡಾವಣೆಯಲ್ಲಿ ಕಟ್ಟಡ / ನಿವೇಶನಗಳ ಮಾರಾಟಕ್ಕಾಗಿ ಜಾಹಿರಾತು ನೀಡಿತ್ತು.

ಈ ಕೆಳಗಿನ ಅನುಸೂಚಿಯಲ್ಲಿ ಹೆಚ್ಚು ಪೂರ್ಣವಾಗಿ ವಿವರಿಸಿದ ಮತ್ತು ಸ್ವತ್ತು ಎಂದು ಉಲ್ಲೇಖಿಸಲಾದ ಅಂತಹ ಒಂದು ಕಟ್ಟಡ ನಿವೇಶನವು ________________________________ಸಂಖ್ಯೆಯ ನಿವೇಶನವಾಗಿದೆ.

ಮತ್ತು ಇಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ ಗುತ್ತಿಗೆಗೆ ಕೊಡುವವನು / ಮಾರಾಟಗಾರನು ಗೊತ್ತುಪಡಿಸಬಹುದಾದಂತೆ ಮೇಲೆ ಹೇಳಲಾದ ಸ್ವತ್ತಿನ ಬೆಲೆಯನ್ನು ಪೂರ್ಣವಾಗಿ ಸಂದಾಯ ಮಾಡುವವರೆಗೆ, ಗುತ್ತಿಗೆ ಪಡೆಯುವನಾಗಿ ಸ್ವತ್ತನ್ನು ಅಧಿಭೋಗಿಸಲು ಗುತ್ತಿಗೆ ಪಡೆಯುವವನು, ಖರೀದಿದಾರನಿಗೆ ಅವಕಾಶ ಮಾಡಿಕೊಡಲು ಗುತ್ತಿಗೆ ಪಡೆಯುವವನ / ಖರೀದಿದಾರನ ಮತ್ತು ಗುತ್ತಿಗೆಗೆ ನೀಡುವವನ / ಮಾರಾಟಗಾರನ ನಡುವೆ ವ್ಯವಹಾರಗಳು ನಡೆದಿರುವುದರಿಂದ.

ಮತ್ತು ಗುತ್ತಿಗೆಗೆ ನೀಡುವವನು / ಮಾರಾಟಗಾರನು 1984ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆ ಮತ್ತು ಷರತ್ತುಗಳು ಮತ್ತು ಇಲ್ಲಿ ಇನ್ನು ಮುಂದೆ ಒಳಗೊಂಡಿರುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಹಾಗೆ ಮಾಡಲು ಒಪ್ಪಿರುವುದರಿಂದ.

ಮತ್ತು ಹೀಗೆ ಸದರಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆ ಮತ್ತು ಷರತ್ತುಗಳು ಮತ್ತು ಈ ಕೆಳಗೆ ನಿರ್ದಿಷ್ಟ ಪಡಿಸಿರುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಗುತ್ತಿಗೆ ಕೊಡುವವನು / ಮಾರಾಟಗಾರನು ಸ್ವತ್ತನ್ನು ಗುತ್ತಿಗೆಗೆ ಕೊಡಲು ಒಪ್ಪಿರುವುದರಿಂದ ಮತ್ತು ಗುತ್ತಿಗೆ ಪಡೆಯುವವನು / ಖರೀದಿದಾರನು ಅದನ್ನು ಗುತ್ತಿಗೆ ತೆಗೆದುಕೊಳ್ಳಲು ಒಪ್ಪಿರುವುದರಿಂದ.

**ಈಗ ಈ ಕರಾರು ನಾಮೆಯನ್ನು ಸಾಕ್ಷೀಕರಿಸಲಾಗಿದೆ :-**

1. ಗುತ್ತಿಗೆ ಪಡೆಯುವವನಿಗೆ / ಖರೀದಿದಾರನಿಗೆ ಈ ಮೂಲಕ ಸ್ವತ್ತಿನ ಸ್ವಾದೀನ ಕೊಡಲಾಗಿದೆ. ಮತ್ತು ಗುತ್ತಿಗೆ ಪಡೆಯುವವನು / ಖರೀದಿದಾರನು, ಸ್ವಾದೀನ ತೆಗೆದುಕೊಂಡ ದಿನಾಂಕದಿಂದ ಹತ್ತು ವರ್ಷಗಳವರೆಗೆ ಅಥವಾ ಗುತ್ತಿಗೆಯನ್ನು ಮುಂಚಿತವಾಗಿ ನಿರ್ಧರಿಸಲಾದರೆ ಅದು ಅಂತ್ಯಗೊಳ್ಳುವವರೆಗೆ ಸ್ವತ್ತಿನ ಗುತ್ತಿಗೆ ಪಡೆಯುವವನು ಅದನ್ನು ಅಧಿಭೋಗಕ್ಕೆ ತೆಗೆದುಕೊಳ್ಳತಕ್ಕದ್ದು. ಸ್ವತ್ತಿನ ಮೌಲ್ಯವೆಂದು ಗುತ್ತಿಗೆ ಪಡೆಯವವನು / ಖರೀದಿದಾರನು ಠೇವಣಿಗೆ ಮಾಡಿದ ಮೊಬಲಗನ್ನು ಗುತ್ತಿಗೆಯ ಅವಧಿಯಲ್ಲಿ, ಈ ದಸ್ತಾವೇಜುಗಳ ನಿಬಂಧನೆ ಮತ್ತು ಷರತ್ತುಗಳನ್ನು ವಿಧಿಬದ್ಧ ಪೂರೈಸುವ ಸಲುವಾಗಿ ಭದ್ರತಾ ಠೇವಣಿಯಾಗಿ ಗುತ್ತಿಗೆಗೆ ನೀಡುವವನು / ಮಾರಾಟಗಾರನು ಹೊಂದಿರತಕ್ಕದ್ದು.

2. ಗುತ್ತಿಗೆ ಪಡೆಯುವವನು / ಖರೀದಿದಾರನು ದಿನಾಂಕ ____________________ ಪ್ರಾರಂಭವಾಗಿ ದಿನಾಂಕ ______________________________ರಂದು, ಅಥವಾ ಅದಕ್ಕೆ ಮೊದಲು ಬಾಡಿಗೆಯಾಗಿ ವರ್ಷಕ್ಕೆ ___________________ ರೂಪಾಯಿಗಳ ಮೊತ್ತವನ್ನು ಸಂದಾಯ ಮಾಡತಕ್ಕದ್ದು.

3. ಗುತ್ತಿಗೆ ಪಡೆಯುವವನು / ಖರೀದಿದಾರನು ಈ ಒಪ್ಪಂದದ ದಿನಾಂಕದಿಂದ ಮೂರು ವರ್ಷಗಳೊಳಗೆ, ಗುತ್ತಿಗೆ ನೀಡುವವನು / ಮಾರಾಟಗಾರನು ಅನುಮೋದಿಸುವ ನಕ್ಷೆ, ವಿನ್ಯಾಸ ಮತ್ತು ಷರತ್ತುಗಳ ಪ್ರಕಾರ ಮತ್ತು 1976ನೇ ಸಾಲಿನ ಕರ್ನಾಟಕ ಪುರಸಭಾ ನಿಗಮ ಅಧಿನಿಯಮಗಳ ಉಪಬಂಧಗಳು ಮತ್ತು ಅದರ ಮೇರೆಗೆ ಮಾಡಲಾದ ಉಪನಿಧಿಗಳಿಗೆ ಅನುಗುಣವಾಗಿ ಸ್ವತ್ತಿನಲ್ಲಿ ಒಂದು ಕಟ್ಟಡವನ್ನು ನಿರ್ಮಿಸತಕ್ಕದ್ದು.

ಪರಂತು, ಗುತ್ತಿಗೆಗೆ ಕೊಡುವವನು/ಮಾರಾಟಗಾರನು ಸಕಾರಣದಿಂದಾಗಿ ಯಾವುದೇ ವಿಶಿಷ್ಟ ಸಂದರ್ಭದಲ್ಲಿ ಕಟ್ಟಡ ನಿರ್ಮಾಣಕ್ಕೆ ಅವದಿಯಲ್ಲಿ ವಿಸ್ತರಿಸಿದರೆ, ಗುತ್ತಿಗೆ ಪಡೆಯುವವನು / ಖರೀದಿದಾರನು, ಅಂತಹ ವಿಸ್ತರಿತ ಅವಧಿಯೊಳಗೆ ಕಟ್ಟಡವನ್ನು ನಿರ್ಮಿಸತಕ್ಕದ್ದು.

3 ಎ. ಈ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರ ನೋಂದಣಿ ದಿನಾಂಕದಿಂದ 3 ವರ್ಷದೊಳಗೆ ಕಟ್ಟಡ ಕಟ್ಟದೆ ಇದ್ದ ಪಕ್ಷದಲ್ಲಿ ಕಟ್ಟಡ ಕಟ್ಟಲು ಕಾಲಾವಕಾಶ ಅವಧಿ ವಿಸ್ತರಣೆಯನ್ನು ಹಂಚಿಕೆ ನಿಯಮಾವಳಿಯಂತೆ ನಿಯಮ 13 (6) ರ ಪ್ರಕಾರ ಸರ್ಕಾರವು ಹೊರಡಿಸಿರುವ ಅಧಿಸೂಚನೆ ಪ್ರಕಾರ ದಂಡ ವಸೂಲಿ ಮಾಡುವ ಷರತ್ತಿಗೊಳಪಟ್ಟಿದೆ.

4. ಗುತ್ತಿಗೆ ಪಡೆಯುವವನು / ಖರೀದಿದಾರನು ಸ್ವತ್ತನ್ನು ವಿಭಜಿಸತಕ್ಕದ್ದಲ್ಲ ಅಥವಾ ಅದರಲ್ಲಿ ಒಂದಕ್ಕಿಂತ ಹೆಚ್ಚು ವಾಸದ ಮನೆಗಳನ್ನು ನಿರ್ಮಾಣ ಮಾಡತಕ್ಕದ್ದಲ್ಲ.

``ವಾಸದ ಮನೆ " ಎಂದರೆ ಸಂಪೂರ್ಣವಾಗಿ ಮಾನವವಾಸಕ್ಕಾಗಿ ನಿರ್ಮಿಸಲಾದ ಕಟ್ಟಡ ಎಂದು ಅರ್ಥ ಮತ್ತು ಅದಕ್ಕೆ ಹೊಂದಿಕೊಂಡಿರುವ ಅಥವಾ ಹೊಂದಿಕೊಂಡಿರದ, ಅಂಗಡಿಯಾಗಿ ಉಪಯೋಗಿಸುತ್ತಿರುವ ಯಾವುದೇ ಮನೆಗಳು ಕಟ್ಟಡಗಳು ಅಥವಾ ದಾಸ್ತಾನು ಮಳಿಗೆ ಕಟ್ಟಡ ಅಥವಾ ಯಾಂತ್ರಿಕ ಶಕ್ತಿಯಿಂದ ಅಥವಾ ಇತರ ರೀತಿಯಲ್ಲಿ ತಯಾರಿಕಾ ಕೆಲಸಗಳನ್ನು ನಡೆಸಲಾಗುತ್ತಿರುವ ಕಟ್ಟಡವನ್ನು ಒಳಗೊಳ್ಳುವುದಿಲ್ಲ.

(ಅ) "ಗುತ್ತಿಗೆ ಪಡೆಯುವವನು", ಆತನಿಗೆ ಗುತ್ತಿಗೆಗೆ ನೀಡಲಾದ ನಿವೇಶನದಲ್ಲಿ ಕಡೆಯಪಕ್ಷ ಎರಡು ಮರಗಳನ್ನು ಬೆಳೆಸತಕ್ಕದ್ದು.

5. ಗುತ್ತಿಗೆ ಪಡೆಯವವನು / ಖರೀದಿದಾರನು ನಿವೇಶನವನ್ನಾಗಲೀ ಅಥವಾ ಗುತ್ತಿಗೆಯ ಅವಧಿಯಲ್ಲಿ ಅದರಲ್ಲಿ ನಿರ್ಮಿಸಬಹುದಾದಂತಹ ಕಟ್ಟಡವನ್ನಾಗಲೀ ಪರಭಾರೆ ಮಾಡತಕ್ಕದ್ದಲ್ಲ. ಅದಾಗ್ಯೂ ಗುತ್ತಿಗೆಗೆ ನೀಡುವವನ / ಮಾರಾಟಗಾರನ ಗುತ್ತಿಗೆ ಪಡೆಯುವವನ / ಖರೀದಿದಾರನ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯನ್ನು ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರ, ಕಾರ್ಪೋರೇಷನ್ ಸಂಸ್ಥೆಗಳಾದ ಕರ್ನಾಟಕ ಗೃಹನಿರ್ಮಾಣ ಮಂಡಳಿ ಅಥವಾ ಭಾರತ ಜೀವವಿಮಾ ನಿಗಮ, ಗೃಹ ನಿರ್ಮಾಣ ಸಹಕಾರಿ ಸಂಘಗಳು ಅಥವಾ ಬ್ಯಾಂಕ್‌ಗಳು ಕಟ್ಟಡ ನಿರ್ಮಾಣಕ್ಕೆ ನೀಡಿದ ಹಣಕ್ಕೆ ಭದ್ರತೆಯೊದಗಿಸಲು ಅಂತಹ ಸರ್ಕಾರ ಅಥವಾ ನಿಗಮಗಳ ಹೆಸರಿನಲ್ಲಿ ಅಡಮಾನ ಮಾಡಲು ಅನುಮತಿ ನೀಡಬಹುದು.

6. ನಿವೇಶನದ ಹಂಚಿಕೆಗಾಗಿ ಸಲ್ಲಿಸುವ ಅರ್ಜಿಯಲ್ಲಿ ಯಾವುದೇ ತಪ್ಪುನಿರೂಪಣೆಯಿದ್ದರೆ, ಯಾವ ಸಂಸ್ಥೆಯಿಂದ ಅವನು ಸಾಲವನ್ನು ಪಡೆಯುತ್ತಾನೋ ಅದರ ಹೆಸರಿನಲ್ಲಿ, ನಿವೇಶನ ಪಡೆದವನು ಸೂಚಿಸಿದ ಅಡಮಾನದ ಹಕ್ಕುಗಳಿಗೆ

ಒಳಪಟ್ಟು, ಅದರ ಮೇಲೆ ಮಾಡಲಾಗಿರುವ ನಿರ್ಮಾಣದ ಜೊತೆಗೆ ಗುತ್ತಿಗೆಗೆ ಕೊಡುವವನು/ ಮಾರಾಟಗಾರನು ಸ್ವತ್ತನ್ನು ಸ್ವಾದೀನಕ್ಕೆ ತೆಗೆದುಕೊಳ್ಳಬಹುದೆಂಬುದಕ್ಕೆ ಗುತ್ತಿಗೆದಾರ / ಖರೀದಿದಾರ ಒಪ್ಪಿದ್ದಾನೆ.

7. ಗುತ್ತಿಗೆಗೆ ಕೊಡುವವನ/ಮಾರಾಟಗಾರನ ಬರವಣಿಗೆಯಲ್ಲಿನ ಒಪ್ಪಿಗೆ ಪಡೆಯದೆ ಕಟ್ಟಡವನ್ನು ವಾಸದ ಉದ್ದೇಶ ಹೊರತು ಇತರ ಯಾವುದೇ ಉಪಯೋಗಕ್ಕೆ ಸ್ವತ್ತನ್ನು ಉಪಯೋಗಿಸಬಾರದು.

8. ಗುತ್ತಿಗೆ ಪಡೆಯುವವನು / ಖರೀದಿದಾರನು, ಸರ್ಕಾರಕ್ಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮತ್ತು ಬೆಂಗಳೂರು ಮಹಾ ನಗರಸಭೆಗೆ ಸ್ವತ್ತಿನ ಸಂಬಂಧದಲ್ಲಿ ತೆರಿಗೆಗಳೂ ಸೇರಿ ಸಂದಾಯ ಮಾಡಬೇಕಾಗಿರುವ, ಎಲ್ಲಾ ವೆಚ್ಚಗಳನ್ನು ಸಂದಾಯ ಮಾಡಲು

9. ಈ ದಾಸ್ತಾವೇಜುಗಳಲ್ಲಿ ಸ್ಪಷ್ಟವಾಗಿ ವಿಧಿಸಿರದ ವಿಚಾರಗಳಲ್ಲಿ ಗುತ್ತಿಗೆಗೆ ನೀಡುವವನು /ಮಾರಾಟಗಾರನು ಗುತ್ತಿಗೆದಾರನಿಗೆ /ಖರೀದಿದಾರನಿಗೆ ನಿರ್ದೇಶನಗಳನ್ನು ನೀಡಲು ಹಕ್ಕುಳ್ಳವನಾಗಿರತಕ್ಕದ್ದು. ಅವುಗಳನ್ನು ಗುತ್ತಿಗೆ ಪಡೆಯುವವನು / ಖರೀದಿದಾರನು ನಿರ್ವಹಿಸತಕ್ಕದ್ದು ಮತ್ತು ಅಂತಹ ನಿರ್ದೇಶನಗಳನ್ನು ನಿರ್ವಹಿಸುವುದಕ್ಕೆ ತಪ್ಪುವುದು ಈ ದಾಸ್ತಾವೇಜುಗಳ ಷರತ್ತುಗಳ ಉಲ್ಲಂಘನೆಯಾಗುತ್ತದೆ.

10. ಗುತ್ತಿಗೆ ಪಡೆಯವವನು / ಖರೀದಿದಾರನು ಬಾಡಿಗೆ ಸಂದಾಯ ಮಾಡಲು ತಪ್ಪಿದರೆ ಅಥವಾ ಈ ಒಪ್ಪಂದದ ಯಾವುದೇ ಷರತ್ತುಗಳು ಅಥವಾ 1984ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳ ಉಪಬಂದಗಳನ್ನು ಉಲ್ಲಂಘಿಸಿದರೆ, ಗುತ್ತಿಗೆಗೆ ಕೊಡುವವನು / ಮಾರಾಟಗಾರನು ಗುತ್ತಿಗೆ ಪಡೆಯುವವನಿಗೆ / ಖರೀದಿದಾರನಿಗೆ ಗುತ್ತಿಗೆಯ ತಿಂಗಳು ಕೊನೆಗೊಳ್ಳುವ ಹದಿನೈದು ದಿವಸಗಳ ನೋಟೀಸನ್ನು ಕೊಟ್ಟಮೇಲೆ ಯಾವುದೇ ಸಮಯದಲ್ಲಿ ಗುತ್ತಿಗೆಯನ್ನು ಅಂತ್ಯಗೊಳಿಸಬಹುದು ಮತ್ತು ಸ್ವತ್ತಿನ ಸ್ವಾಧೀನವನ್ನು ತೆಗೆದುಕೊಳ್ಳಬಹುದು. ಅಲ್ಲದೇ ಗುತ್ತಿಗೆಗೆ ಕೊಡುವವನು / ಮಾರಾಟಗಾರನು ಈ ದಾಸ್ತಾವೇಜುಗಳ ಕಂಡಿಕೆ 1ರ ಮೇರೆಗೆ ಭದ್ರತಾ ಠೇವಣಿಯಾಗಿ ಪರಿಗಣಿಸಿದ ಮೊತ್ತದ ಶೇಕಡಾ ಹನ್ನೆರಡೊವರೆಯಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.

11. ಕಂಡಿಕೆ 1ರಲ್ಲಿ ಉಲ್ಲೇಖಿಸಲಾದ ಹತ್ತು ವರ್ಷಗಳ ಕೊನೆಯಲ್ಲಿ ಗುತ್ತಿಗೆ ಅವಧಿಗೆ ಗುತ್ತಿಗೆ ಪಡೆಯವವನು / ಖರೀದಿದಾರನು ಸಂದಾಯ ಮಾಡಿರುವ ಬಾಡಿಗೆಯ ಒಟ್ಟು ಮೊತ್ತವನ್ನು ಸ್ವತ್ತಿನ ಬೆಲೆಯ ಬಾಕಿಯಲ್ಲಿ ಸರಿಹೊಂದಿಸಿಕೊಳ್ಳತಕ್ಕದ್ದು.

12. ಗುತ್ತಿಗೆ ಪಡೆಯುವವನು / ಖರೀದಿದಾರನು ಇದರಲ್ಲಿ ಹೇಳಲಾಗಿರುವ ಎಲ್ಲಾ ಷರತ್ತುಗಳನ್ನು ನಿರ್ವಹಿಸಿದ್ದರೆ ಮತ್ತು ಅವುಗಳಲ್ಲಿ ಯಾವುದನ್ನೇ ಆದರೂ ಉಲ್ಲಂಘಿಸಿರದಿದ್ದರೆ, ಗುತ್ತಿಗೆಗೆ ಕೊಡುವವನು /ಮಾರಾಟಗಾರನು ಕಂಡಿಕೆ 1ರಲ್ಲಿ ಉಲ್ಲೇಖಿಸಲಾದ ಹತ್ತು ವರ್ಷಗಳ ಕೊನೆಯಲ್ಲಿ ಗುತ್ತಿಗೆ ಪಡೆಯುವವನಿಗೆ /ಖರೀದಿದಾರನಿಗ ಸ್ವತ್ತನ್ನು ಮಾರತಕ್ಕದ್ದು ಮತ್ತು ಅಂತಹ ಮಾರಾಟದ ಸಂಬಂಧದಲ್ಲಿನ ಎಲ್ಲ ಸಂಬಂಧಪಟ್ಟ ವೆಚ್ಚಗಳನ್ನು ಎಂದರೆ ಸ್ಟಾಂಪು, ಸುಂಕ, ನೋಂದಣಿ ವೆಚ್ಚಗಳು ಇತ್ಯಾದಿಗಳನ್ನು ಗುತ್ತಿಗೆ ಪಡೆಯುವವನು / ಖರೀದಿದಾರನು ಭರಿಸತಕ್ಕದ್ದು.

13. ಅಲ್ಲದೇ ಗುತ್ತಿಗೆ ಪಡೆಯುವವನು / ಖರೀದಿದಾರನು, ಈ ಒಪ್ಪಂದವು 1984ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮುಗಳಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ನಿವೇಶನದ ಹಂಚಿಕೆಗಾಗಿ ಆತನ / ಆಕೆಯ ಅರ್ಜಿಯಲ್ಲಿ ಗುತ್ತಿಗೆ ಪಡೆಯುವವನು / ಖರೀದಿದಾರನು ಅದಕ್ಕೆ ಒಪ್ಪಿದ್ದಾನೆ /ಒಪ್ಪಿದ್ದಾಳೆ ಎಂಬುದನ್ನು ಈ ಮೂಲಕ ಸ್ಥಿರೀಕರಿಸುತ್ತಾನೆ / ಸ್ಥಿರೀಕರಿಸುತ್ತಾಳೆ.

14. ಗುತ್ತಿಗೆ ಪಡೆಯವವನನ್ನು /ಖರೀದಿದಾರನನ್ನು ಕಂಡಿಕೆ ಹತ್ತರಮೇರೆಗೆ ಹೊರಹಾಕಿದರೆ ಆತನು / ಆಕೆಯು ಗುತ್ತಿಗೆಗೆ ಕೊಟ್ಟವನಿಂದ /ಮಾರಾಟಗಾರನಿಂದ ಈ ದಾಸ್ತಾವೇಜುಗಳ ಬಲದಿಂದಾಗಿ ಅಥವಾ ಅವುಗಳ ಅನುಸಾರವಾಗಿ ಅಭಿವೃದ್ಧಿ ಪಡಿಸಿದುದರ ಅಥವಾ ಆತನಿಂದ/ಆಕೆಯಿಂದ ಅನುಸೂಚಿತ ಸ್ವತ್ತಿನಲ್ಲಿ ನಿರ್ಮಿಸಿದ ಮೇಲು ಕಟ್ಟಡದ ಬೆಲೆಯ ಬಗೆಗಿನ ಯಾವುದೇ ಪರಿಹಾರವನ್ನು ಬೇಡಿಕೊಳ್ಳಲು ಹಕ್ಕುಳ್ಳವನಾಗಿರತಕ್ಕುದ್ದಲ್ಲ.

15. ಗುತ್ತಿಗೆ ಪಡೆಯುವವನಿಂದ /ಖರೀದಿದಾರನಿಂದ ಸ್ವೀಕರಿಸಲಾದ ಗುತ್ತಿಗೆ ಕೊಡುವವನ / ಮಾರಾಟಗಾರನ ಬಳಿಯಿರುವ ರೂ. ____________________(____________________________________________________ ______________________________ ರೂಪಾಯಿಗಳು ಮಾತ್ರ) ಗಳನ್ನು ಗುತ್ತಿಗೆ ಪಡೆಯವವನ / ಖರೀದಿದಾರನ ವಿರುದ್ಧ ತೆಗೆದುಕೊಳ್ಳಬಹುದಾದ ಹೊರದೂಡುವ (ಎವಿಕ್ಷನ್) ವ್ಯವಹರಣೆಗಳು ಸೇರಿದಂತೆ ಯಾವುದೇ ಕಾನೂನುಬದ್ಧ

ವ್ಯವಹರಣೆಗಳ ಸಂಬಂಧದಲ್ಲಿ ಸಂದಾಯ ಮಾಡುವ ಯಾವುದೇ ನಷ್ಟ ಅಥವಾ ವೆಚ್ಚಕ್ಕೆ ಭದ್ರತೆಯಾಗಿ ತಮ್ಮಲ್ಲೇ ಇಟ್ಟುಕೊಳ್ಳಬೇಕೆಂದು ಮತ್ತು ಅಂತಹ ಎಲ್ಲ ವೆಚ್ಚಗಳಿಗೆ ಗುತ್ತಿಗೆಗೆ ಕೊಡುವವನು / ಮಾರಾಟಗಾರನು ಇಟ್ಟುಕೊಂಡಿರುವ ಗುತ್ತಿಗೆದಾರ / ಖರೀದಿದಾರನ ಹಣದಿಂದಲೇ ಎಲ್ಲ ವೆಚ್ಚಗಳನ್ನು ಭರಿಸತಕ್ಕುದ್ದು ಎಂದು ಇಬ್ಬರು ಪಕ್ಷಕಾರರು ಒಪ್ಪಿಕೊಂಡಿದ್ದಾರೆ.

# ಅನುಸೂಚಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ____________________ ಬಡಾವಣೆಯಲ್ಲಿ ____________________ ಬ್ಲಾಕಿನಲ್ಲಿ ರಚಿಸಿದ ನಿವೇಶನದ ಸಂಖ್ಯೆ ____________________

ನಿವೇಶನದ ಚೆಕ್ಕುಬಂದಿ : ಪೂರ್ವದಲ್ಲಿ : ____________________

ಪಶ್ಚಿಮದಲ್ಲಿ : ____________________

ಉತ್ತರದಲ್ಲಿ : ____________________

ದಕ್ಷಿಣದಲ್ಲಿ : ____________________

ಅಳತೆಗಳು ಪೂರ್ವದಿಂದ ಪಶ್ಚಿಮಕ್ಕೆ ____________________ ಉತ್ತರದಿಂದ ದಕ್ಷಿಣಕ್ಕೆ ____________________ಅಡಿ / ಮೀಟರ್, ಒಟ್ಟು ವಿಸ್ತೀರ್ಣ ____________________ ಚದುರ ಗಜ / ಚದುರ ಮೀಟರುಗಳು.

ಇದಕ್ಕೆ ಸಾಕ್ಷಿಯಾಗಿ ಪಕ್ಷಕಾರರು ಈ ಒಪ್ಪಂದಕ್ಕೆ ತಮ್ಮ ರುಜುಗಳನ್ನು ಹಾಕಿದ್ದಾರೆ.

**ಸಾಕ್ಷಿದಾರರು :**
(ಗುತ್ತಿಗೆ ಕೊಡುವವರ / ಮಾರಾಟಗಾರರ ಪರವಾಗಿ)

1)

2)

ಉಪಕಾರ್ಯದರ್ಶಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

**ಸಾಕ್ಷಿದಾರರು :**
(ಗುತಿಗೆ ಪಡೆಯುವವರ / ಖರೀದಿದಾರರ ಪರವಾಗಿ)

1)

2)

ಗುತ್ತಿಗೆ ಪಡೆಯುವವ / ಖರೀದಿದಾರರ ಸಹಿ